

ನಗರವೂ ಹೊಸ ವರ್ಷವನ್ನು ಸ್ವಾಗತಿಸಲು ಕೆಂಪು ಬಣ್ಣದ ಉಡುಗೆಯನ್ನು ತೊಟ್ಟು ಸಿಂಗಾರಗೊಂಡ ನವವಧುವಿನಂತೆ ತೋರುತ್ತದೆ.

ಒಂದಾನೊಂದು ಕಾಲದಲ್ಲಿ ಕೃಷಿ ಪ್ರಧಾನವಾಗಿದ್ದ ಚೀನಾ ಹೊಸ ವರ್ಷದ ಸ್ವಾಗತಕ್ಕಾಗಿ ತಮ್ಮ ಹೊಲಗದ್ದೆಗಳನ್ನು ಮತ್ತು ಕೃಷಿ ಉಪಕರಣಗಳಿಗೆ ಆರಾಧಿಸುತ್ತದೆ. ಉದ್ಯಮ ಪ್ರಧಾನವಾಗಿರುವ ನಗರಗಳಲ್ಲಿ ವ್ಯಾಪಾರಿ ಮಳಿಗೆಗಳು, ಪ್ರವಾಸಿ ಆಕರ್ಷಕ ತಾಣಗಳ ಮುಖ್ಯ ಬೀದಿಗಳು ಸಿಂಗಾರಗೊಳ್ಳುತ್ತವೆ. ಕೆಂಪು ಬಣ್ಣ ಚೀನೀಯರಿಗೆ ಶುಭ ಮತ್ತು ಸಮೃದ್ಧಿಯ ಸಂಕೇತ. ಆದ್ದರಿಂದಲೇ ಕೆಂಪು ಬಣ್ಣದ ಅನಾನಸು ಮತ್ತು ಕಿತ್ತಳೆ ಹಣ್ಣುಗಳ ಆಕಾರದ ಆಕಾಶ ಬುಟ್ಟಿಗಳನ್ನು ಚೀನೀ ಮನೆ– ಮಂದಿರಗಳಲ್ಲಿ ತೋರಣದಂತೆ ಕಟ್ಟುತ್ತಾರೆ. ನೋಡುವವರ ಕಣ್ಣಿಗೆ ಸ್ವಪ್ನ ಲೋಕವೇ ಧರೆಗಿಳಿದು ಬಂದಂತೆ ತೋರುತ್ತದೆ.

## ಹೊಸ ವರ್ಷದ ಮುನ್ನಾ ದಿನ

ಹೊಸ ವರ್ಷದ ಬಗ್ಗೆ ಚೀನೀ ದಂತಕಥೆಗಳಲ್ಲಿ ಒಂದು ಕುತೂಹಲಕಾರಿ ಉಲ್ಲೇಖವಿದೆ. ಸಾವಿರಾರು ವರ್ಷಗಳ ಹಿಂದೆ ಸಮುದ್ರವಾಸಿಯಗಿದ್ದ ನೀಆನ್ ಎಂಬ ಸಿಂಹದ ತಲೆ ಮತ್ತು ಎತ್ತಿನ ದೇಹವುಳ್ಳ ದೈತ್ಯಾಕಾರದ ಜೀವಿಯೊಂದು ಪ್ರತಿವರ್ಷ ಹೊಸ ವರ್ಷದ ಮುನ್ನಾ ದಿನ ಸಮುದ್ರದಿಂದ ಹೊರ ಬಂದು ಜನ, ಜಾನುವಾರುಗಳನ್ನು ಕಬಳಿಸಿ, ಮನೆ ಮತ್ತು ಬೆಳೆಗಳನ್ನು ನಾಶ ಮಾಡುತ್ತಿತ್ತಂತೆ. ಉಪದ್ರವಿ ನೀಆನ್ ಕಾಟಕ್ಕೆ ಬೇಸತ್ತ ಜನರು ಅದನ್ನು ದೂರವಿಡಲು ಉಪಾಯ ಹುಡುಕತೊಡಗಿದರು. ಹೀಗಿರುವಾಗ ಒಂದು ದಿನ ಅಕಸ್ಮಾತ್ತಾಗಿ ನೀಆನ್



ಕೆಂಪು ಬಣ್ಣವನ್ನು ಕಂಡರೆ ಭೀತಿಪಡುವದಷ್ಟೇ ಅಲ್ಲ, ಕಿವಿಗಡಚಿಕ್ಕುವ ಸದ್ದುಗದ್ದಲಕ್ಕೆ ಹೆದರಿ ಓಡಿ ಹೋಗುತ್ತದೆ ಎಂಬ ರಹಸ್ಯ ಜನರಿಗೆ ತಿಳಿಯಿತು. ನೀಆನ್ ದೂರವಿಡಲು ಜನ ತಮ್ಮ ಮನೆಗಳ ಮುಂದೆ, ಬಾಗಿಲುಗಳ ಮೇಲೆ, ಕೆಂಪು ಕಾಗದದ ಚಿಹ್ನೆಗಳನ್ನು ಹಚ್ಚುವುದು ಹಾಗೂ ಕೆಂಪು ಬಣ್ಣದ ಕಂದೀಲುಗಳನ್ನು ತೂಗುಬಿಡುವುದನ್ನು ರೂಢಿ ಮಾಡಿಕೊಂಡರು. ಇಷ್ಟೇ ಅಲ್ಲ ಸದ್ದುಗದ್ದಲಕ್ಕಂಜುವ ನೀಆನ್ ಅಂಜಿಸಿ, ಓಡಿಸಲು ಪಟಾಕಿಗಳನ್ನೂ ಹಾರಿಸತೊಡಗಿದರು. ಈ ಎಲ್ಲ ಮುಂಜಾಗರೂಕತೆಗಳ ಫಲವಾಗಿ ನೀಆನ್ ಹಾವಳಿಯು ಕ್ರಮೇಣ ನಿಂತುಹೋಯಿತು. ಈ ಸಂದರ್ಭವನ್ನು ವರ್ಷಕ್ಕೊಮ್ಮೆ ಆಚರಿಸುವ ಸಂಪ್ರದಾಯ ಬೆಳೆದು ಬಂದು ಹೊಸ ವರ್ಷದ ಹಬ್ಬವಾಗಿ ಆಚರಣೆಗೊಳ್ಳತೊಡಗಿತು.

ಚೀನೀಯರು ತಮ್ಮ ಮನೆಯ ಮುಂಬಾಗಿಲಿಗೆ ದೇವರ ಚಿತ್ರಗಳನ್ನು ಅಂಟಿಸುತ್ತಾರೆ. ಈ ದೇವದ್ವಯರು ದುಷ್ಟಶಕ್ತಿಗಳು ಮನೆಯನ್ನು ಪ್ರವೇಶಿಸದಂತೆ ತಡೆಯುತ್ತಾರೆ ಎನ್ನುವುದು ನಂಬಿಕೆ. ದುಷ್ಟಶಕ್ತಿ ಮನೆಯೊಳಗೆ ಪ್ರವೇಶಿಸದಂತೆ ಇದು ತಡೆಯುತ್ತದೆ. ಕಿಟಕಿಗಳ ಮೇಲೆ ಪುರಾಣ, ದಂತಕಥೆ ಅಥವಾ ಚೀನೀ ಸಂಗೀತ ನಾಟಕದ ದೃಶ್ಯಗಳಿರುವ ಕಾಗದದ ಕೆಂಪು ಬಣ್ಣದ ಕಟೌಟುಗಳನ್ನು ಹಚ್ಚುತ್ತಾರೆ. ಪ್ರತಿ ಕುಟುಂಬದಲ್ಲಿ ಹಿರಿಯರು ಕೆಂಪು ಲಕೋಟೆಗಳಲ್ಲಿ ಹಣವನ್ನಿಟ್ಟು ತಮ್ಮ ಮಕ್ಕಳಿಗೆ ಮತ್ತು ಮೊಮ್ಮಕ್ಕಳಿಗೆ ಉಡುಗೊರೆ ನೀಡಿ, ಆರೋಗ್ಯ, ಸಮೃದ್ಧಿ, ಯಶಸ್ಸು ಹಾಗೂ ಅದೃಷ್ಟಗಳು ದೊರೆಯಲಿ ಎಂದು ಹರಸುತ್ತಾರೆ. ಈ ಸಂಭ್ರಮಕ್ಕೆ ವಿಶೇಷ ಭೋಜನವನ್ನು ಹಂಚಿ ಸವಿಯುವುದು ಮೆರುಗನ್ನು ಕೊಡುತ್ತದೆ. ಮೀನು, ವಿವಿಧ ತರಕಾರಿ, ಸೊಪ್ಪು, ಮಾಂಸ ಅಡುಗೆ ಹಬ್ಬದ ಹಿಂದಿನ ರಾತ್ರಿಯ ಭೋಜನಕೂಟದಲ್ಲಿ ಇರಲೇಬೇಕಾದ ಭಕ್ಷ್ಯಗಳು.

ಸಂಜೆ ಸುಮಾರು ಎಂಟು ಗಂಟೆಯ ಹೊತ್ತಿಗೆ ಹೊಸ ವರ್ಷವನ್ನು ಸ್ವಾಗತಿಸಲು ಸಾಂಪ್ರದಾಯಿಕ ಸಂಗೀತ ಚಟುವಟಿಕೆ ನಡೆಯುತ್ತದೆ. ಇದರಲ್ಲಿ ನರ್ತಕ, ನರ್ತಕಿಯರು ಪಾಲ್ಗೊಂಡು ಉತ್ಸವಕ್ಕೆ ಮತ್ತಷ್ಟು ಸೊಗಸು ತುಂಬುತ್ತಾರೆ. ಆಗ ಮೊಳಗುವ ಘಂಟೆ ನಾದ ದುರದೃಷ್ಟವನ್ನೆಲ್ಲ ಓಡಿಸಿ ಒಳ್ಳೆಯ ಯೋಗವನ್ನು ತರುತ್ತದೆನ್ನುವ ಪ್ರತೀತಿಯೂ ಇದೆ.

## ಶುಭ ಕೋರಲು ಜೋಡಿ ಕಿತ್ತಳೆ

ಹೊಸ ವರ್ಷದ ದಿನದಂದು ಮಾಡುವ ಒಳ್ಳೆಯ ಶುಭ ಸೂಚಕ ಕೆಲಸಗಳು ವರ್ಷವಿಡೀ ಮಾಡುವ ಕೆಲಸಗಳ ಮೇಲೆ ಪರಿಣಾಮ ಬೀರುತ್ತವೆ ಎನ್ನುವುದು ಚೀನೀಯರ ದೃಢ ವಿಶ್ವಾಸ. ಅಂತೆಯೇ ಈ ದಿನ ಪ್ರಾರ್ಥನೆ, ಬಂಧು ಬಳಗದ ಭೇಟಿ, ಸಿಂಹದ ಹಾಗೂ ಡ್ರ್ಯಾಗನ್ ನೃತ್ಯಗಳ ವೀಕ್ಷಣೆ, ಸಾಂಪ್ರದಾಯಿಕ ಆಹಾರ ಸೇವನೆ ಇವೇ ಮುಂತಾದ ಹರ್ಷದಾಯಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಹೊಸ ವರ್ಷದ ಮೊದಲ ದಿನದಂದು ಚೀನೀಯರು ತಮ್ಮ ಪೂರ್ವಜರನ್ನು ಗೌರವಿಸಲು ಬಗೆ ಬಗೆಯ ಆಹಾರ, ತಿಂಡಿ, ತಿನಿಸುಗಳನ್ನು ಅರ್ಪಿಸುತ್ತಾರೆ. ಹಬ್ಬಕ್ಕಾಗಿ ಹೆಣ್ಣುಮಕ್ಕಳು ಕೆಂಪು ಬಣ್ಣದ ಸಾಂಪ್ರದಾಯಿಕ ಉಡುಗೆ ತೊಡುತ್ತಾರೆ. ಆತ್ಮೀಯರು, ಬಂಧು ಬಳಗಕ್ಕೆ ಜೋಡಿ ಕಿತ್ತಳೆಹಣ್ಣು ವಿನಿಮಯ ಮಾಡಿಕೊಳ್ಳುವ ಮೂಲಕ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತಾರೆ.